ಒಟ್ಟು ಮುದ್ರಿತ ಪುಟಗಳ ಸಂಖ್ಯೆ : 12 ]
Total No. of Printed Pages : 12 ]
ಒಟ್ಟು ಪ್ರಶ್ನೆಗಳ ಸಂಖ್ಯೆ : 47 ]
Total No. of Questions : 47 ]
**ಸಂಕೇತ ಸಂಖ್ಯೆ : 97-K**
**Code No. : 97-K**

**A**

**CCE RR**
**UNREVISED**
**FULL SYLLABUS**

**Question Paper Serial No. 210**

# ವಿಷಯ : ರಾಜ್ಯಶಾಸ್ತ್ರ

# Subject : POLITICAL SCIENCE

**(ಕನ್ನಡ ಮಾಧ್ಯಮ / Kannada Medium)**

**(ಪುನರಾವರ್ತಿತ ಶಾಲಾ ಅಭ್ಯರ್ಥಿ / Regular Repeater)**

ದಿನಾಂಕ : 13. 06. 2023 ] [ Date : 13. 06. 2023
ಸಮಯ : ಬೆಳಗ್ಗೆ 10-30 ರಿಂದ ಮಧ್ಯಾಹ್ನ 1-45 ರವರೆಗೆ ] [ Time : 10-30 A.M. to 1-45 P.M.
ಗರಿಷ್ಠ ಅಂಕಗಳು : 80 ] [ Max. Marks : 80

***ಪರೀಕ್ಷಾರ್ಥಿಗಾಗಿ ಸಾಮಾನ್ಯ ಸೂಚನೆಗಳು :***

1. ಈ ಪ್ರಶ್ನೆಪತ್ರಿಕೆಯು ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಒಟ್ಟು 47 ಪ್ರಶ್ನೆಗಳನ್ನು ಹೊಂದಿದೆ.
2. ಈ ಪ್ರಶ್ನೆಪತ್ರಿಕೆಯನ್ನು ಹಿಮ್ಮುಖ ಜಾಕೆಟ್ ಮೂಲಕ ಮೊಹರು (ಸೀಲ್) ಮಾಡಲಾಗಿದೆ. ಪರೀಕ್ಷೆ ಪ್ರಾರಂಭವಾಗುವ ಸಮಯಕ್ಕೆ ನಿಮ್ಮ ಪ್ರಶ್ನೆಪತ್ರಿಕೆಯ ಬಲಬದಿ ಪಾರ್ಶ್ವವನ್ನು ಕತ್ತರಿಸಿ, ಪ್ರಶ್ನೆಪತ್ರಿಕೆಯಲ್ಲಿ ಎಲ್ಲಾ ಪುಟಗಳು ಇವೆಯೇ ಎಂದು ಪರೀಕ್ಷಿಸಿಕೊಳ್ಳಿ.
3. ವಸ್ತುನಿಷ್ಠ ಮತ್ತು ವಿಷಯನಿಷ್ಠ ಮಾದರಿಯ ಪ್ರಶ್ನೆಗಳಿಗೆ ಕೊಟ್ಟಿರುವ ಸೂಚನೆಗಳನ್ನು ಪಾಲಿಸಿ.
4. ಬಲ ಭಾಗದಲ್ಲಿ ಕೊಟ್ಟಿರುವ ಅಂಕಿಗಳು ಪ್ರಶ್ನೆಗಳಿಗಿರುವ ಪೂರ್ಣ ಅಂಕಗಳನ್ನು ತೋರಿಸುತ್ತವೆ.
5. ಪ್ರಶ್ನೆಪತ್ರಿಕೆಯನ್ನು ಓದಿಕೊಳ್ಳಲು 15 ನಿಮಿಷಗಳ ಕಾಲಾವಕಾಶವು ಸೇರಿದಂತೆ, ಉತ್ತರಿಸಲು ನಿಗದಿಪಡಿಸಲಾದ ಸಮಯವನ್ನು ಪ್ರಶ್ನೆಪತ್ರಿಕೆಯ ಮೇಲ್ಭಾಗದಲ್ಲಿ ನೀಡಲಾಗಿದೆ.

ಇಲ್ಲಿಂದ ಕತ್ತರಿಸಿ

**TEAR HERE TO OPEN THE QUESTION PAPER**
**ಪ್ರಶ್ನೆಪತ್ರಿಕೆಯನ್ನು ತೆರೆಯಲು ಇಲ್ಲಿ ಕತ್ತರಿಸಿ**

**Tear here**

**I. ಕೆಳಗಿನ ಪ್ರಶ್ನೆಗಳಿಗೆ ಅಥವಾ ಅಪೂರ್ಣ ಹೇಳಿಕೆಗಳಿಗೆ ನಾಲ್ಕು ಆಯ್ಕೆಗಳನ್ನು ನೀಡಲಾಗಿದೆ. ಅವುಗಳಲ್ಲಿ ಸೂಕ್ತವಾದ ಒಂದು ಉತ್ತರವನ್ನು ಆರಿಸಿ, ಅದರ ಕ್ರಮಾಕ್ಷರದೊಂದಿಗೆ ಬರೆಯಿರಿ :**

**10 × 1 = 10**

1. ಭಾರತದಲ್ಲಿ ಸಂವಿಧಾನ ರಚನಾ ಸಭೆಯ ಶಾಸನಾತ್ಮಕ ಸಲಹೆಗಾರರು

   (A) ಡಿ.ಪಿ. ಕೇತನ್

   (B) ಕೆ.ಎಂ. ಮುನ್ಷಿ

   (C) ಬಿ.ಎಲ್. ಮಿತ್ತರ್

   (D) ಬಿ.ಎನ್. ರಾವ್

2. ಭಾರತ ಸಂವಿಧಾನದ ಆತ್ಮ

   (A) ಪ್ರಸ್ತಾವನೆ

   (B) ವಯಸ್ಕ ಮತದಾನ

   (C) ಮೂಲಭೂತ ಹಕ್ಕುಗಳು

   (D) ಮೂಲಭೂತ ಕರ್ತವ್ಯಗಳು

3. “ಒಂದು ರಾಜ್ಯದ ದಕ್ಷತೆಯನ್ನು ಅದು ತನ್ನ ಜನತೆಗೆ ನೀಡಿರುವ ಹಕ್ಕುಗಳಿಂದ ತಿಳಿಯಬಹುದು” ಎಂದು ಹೇಳಿದವರು

(A) ಡಿ.ಡಿ. ಬಸು

(B) ವುಡ್ರೋ ವಿಲ್ಸನ್

(C) ಹೆಚ್.ಜೆ. ಲಾಸ್ಕೀ

(D) ಜಾನ್

4. ಭಾರತದ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಎರವಲು ಪಡೆದಿರುವುದು

(A) ಸ್ವಿಸ್ ಸಂವಿಧಾನದಿಂದ

(B) ಐರ್ಲೆಂಡ್ ಸಂವಿಧಾನದಿಂದ

(C) ಅಮೆರಿಕ ಸಂವಿಧಾನದಿಂದ

(D) ಫ್ರಾನ್ಸ್ ಸಂವಿಧಾನದಿಂದ

5. ನಮ್ಮ ರಾಷ್ಟ್ರೀಯ ಅಭಿವೃದ್ಧಿ ಮಂಡಳಿಯ ಪದನಿಮಿತ್ತ ಅಧ್ಯಕ್ಷರು

(A) ಉಪರಾಷ್ಟ್ರಪತಿಗಳು

(B) ರಾಷ್ಟ್ರಪತಿಗಳು

(C) ರಾಜ್ಯಪಾಲರು

(D) ಪ್ರಧಾನ ಮಂತ್ರಿಗಳು

6. ರಾಜ್ಯಸಭೆಯ ಅಧಿವೇಶನ ನಡೆಸಲು ಅಗತ್ಯವಿರುವ ಕನಿಷ್ಠ ಸದಸ್ಯರ ಸಂಖ್ಯೆ

(A) 15

(B) 25

(C) 50

(D) 75

7. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರ ನಿವೃತ್ತಿಯ ವಯಸ್ಸು

(A) 62 ವರ್ಷಗಳು

(B) 65 ವರ್ಷಗಳು

(C) 60 ವರ್ಷಗಳು

(D) 58 ವರ್ಷಗಳು

8. ರಾಜ್ಯ ಮಂತ್ರಿಮಂಡಲದ ನಾಯಕ

(A) ಮುಖ್ಯ ಮಂತ್ರಿಗಳು

(B) ಗೃಹ ಮಂತ್ರಿಗಳು

(C) ಕಾನೂನು ಮಂತ್ರಿಗಳು

(D) ಉಪಮುಖ್ಯ ಮಂತ್ರಿಗಳು

9. ಹಣಕಾಸಿನ ಮಸೂದೆಯನ್ನು ವಿಧಾನ ಪರಿಷತ್ತು ತಡೆಹಿಡಿಯಬಹುದಾದ ಅವಧಿ

(A) 10 ದಿನಗಳು

(B) 13 ದಿನಗಳು

(C) 15 ದಿನಗಳು

(D) 14 ದಿನಗಳು

10. ರಾಜ್ಯದೊಳಗಿನ ಅತ್ಯುನ್ನತ ನ್ಯಾಯಾಲಯ

(A) ಲೋಕ ಅದಾಲತ್

(B) ಕಂದಾಯ ನ್ಯಾಯಾಲಯ

(C) ಉಚ್ಚ ನ್ಯಾಯಾಲಯ

(D) ಸಿವಿಲ್ ನ್ಯಾಯಾಲಯ

**II.** 11. ***A*-ಪಟ್ಟಿಯ ರಾಷ್ಟ್ರಗಳನ್ನು *B*-ಪಟ್ಟಿಯ ಚುನಾಯಿತ ಮನೆಗಳೊಂದಿಗೆ ಹೊಂದಿಸಿ, ಉತ್ತರವನ್ನು ಕ್ರಮಾಕ್ಷರದೊಂದಿಗೆ ಬರೆಯಿರಿ : 5 × 1 = 5**

| ***A*-ಪಟ್ಟಿ** | | ***B*-ಪಟ್ಟಿ** | |
|---|---|---|---|
| (A) | ಭಾರತ | (i) | ರಾಷ್ಟ್ರೀಯ ಪಂಚಾಯತ್ |
| (B) | ಜಪಾನ್ | (ii) | ತ್ಸೆಂಗ್‌ಡು |
| (C) | ಅಮೆರಿಕಾ | (iii) | ಪಾರ್ಲಿಮೆಂಟ್ |
| (D) | ಭೂತಾನ್ | (iv) | ಡಯಟ್ |
| (E) | ನೇಪಾಳ | (v) | ಕಾಂಗ್ರೆಸ್ |
| | | (vi) | ಜಡಿಯಾ ಸಂಸದ್ |
| | | (vii) | ನ್ಯಾಷನಲ್ ಅಸೆಂಬ್ಲಿ |

**III. ಈ ಕೆಳಗಿನ ಪ್ರಶ್ನೆಗಳಿಗೆ ಒಂದೊಂದು ವಾಕ್ಯದಲ್ಲಿ ಉತ್ತರ ಬರೆಯಿರಿ : 15 × 1 = 15**

12. ಮೈಸೂರು ಪ್ರಾಂತ್ಯದಿಂದ ಸಂವಿಧಾನ ರಚನಾ ಸಭೆಗೆ ನಾಮಕರಣಗೊಂಡ ಮುಸ್ಲಿಂ ಮಹಿಳಾ ಸದಸ್ಯರನ್ನು ಹೆಸರಿಸಿ.

13. ಕೆ.ಸಿ. ವ್ಹೀರ್‌ರವರು ಭಾರತದ ಸಂಯುಕ್ತ ವ್ಯವಸ್ಥೆಯನ್ನು "ಅರೆ ಸಂಯುಕ್ತ ವ್ಯವಸ್ಥೆ" ಎಂದು ಕರೆದಿದ್ದಾರೆ. ಏಕೆ ?

14. 1858 ರ ಶಾಸನವನ್ನು ಭಾರತದ ಮ್ಯಾಗ್ನಕಾರ್ಟ್ ಎಂದು ಬಣ್ಣಿಸಲಾಗಿದೆ. ಏಕೆ ?

15. ಭಾರತ ಸಂವಿಧಾನದ ಯಾವ ತಿದ್ದುಪಡಿಯ ಮೂಲಕ ಆಸ್ತಿಯ ಹಕ್ಕನ್ನು ಮೂಲಭೂತ ಹಕ್ಕುಗಳ ಪಟ್ಟಿಯಿಂದ ತೆಗೆದು ಹಾಕಲಾಯಿತು ?

16. ಮಾಹಿತಿ ಹಕ್ಕು ಕಾಯ್ದೆಯನ್ನು ಏಕೆ ಜಾರಿಗೊಳಿಸಲಾಯಿತು ?

17. "ಒಂದು ವೇಳೆ ರಾಜ್ಯನೀತಿ ನಿರ್ದೇಶಕ ತತ್ವಗಳನ್ನು ಅಕ್ಷರಶಃ ಅನುಷ್ಠಾನಗೊಳಿಸಿದ್ದೇ ಆದರೆ ಭಾರತವು ಭೂಮಿಯ ಮೇಲಿನ ಸ್ವರ್ಗವಾಗುತ್ತದೆ." ಎಂದು ಹೇಳಿದವರು ಯಾರು ?

18. ಭಾರತದ ಗಣತಂತ್ರ ವ್ಯವಸ್ಥೆಯಲ್ಲಿ ಅತ್ಯುನ್ನತವಾದ ಸ್ಥಾನ ಯಾವುದು ?

19. ರಾಜ್ಯಪಾಲರು ಯಾವ ಸಂದರ್ಭಗಳಲ್ಲಿ ಸುಗ್ರೀವಾಜ್ಞೆಗಳನ್ನು ಹೊರಡಿಸುತ್ತಾರೆ ?

20. ರಾಜ್ಯ ಸರ್ಕಾರವು ವಿಚಾರಣಾ ಆಯೋಗಗಳನ್ನು ಏಕೆ ನೇಮಿಸುತ್ತದೆ ?

21. ಕೇಂದ್ರ ಲೋಕಸೇವಾ ಆಯೋಗದ ಅಧ್ಯಕ್ಷರ ನೇಮಕಾತಿಯಲ್ಲಿ ರಾಷ್ಟ್ರಪತಿಗಳಿಗೆ ಸಲಹೆ ನೀಡುವವರು ಯಾರು ?

22. ಸಾರ್ವತ್ರಿಕ ವಯಸ್ಕ ಮತದಾನ ಪದ್ಧತಿ ಎಂದರೇನು ?

23. ಭಾರತ ಒಂದು ಸಾರ್ವಭೌಮ ರಾಷ್ಟ್ರ. ಹೇಗೆ ?

24. ರಾಜ್ಯನೀತಿ ನಿರ್ದೇಶಕ ತತ್ವಗಳು ನ್ಯಾಯಾರ್ಹವಾದವುಗಳಲ್ಲ. ಏಕೆ ?

25. ಸರ್ವೋಚ್ಚ ನ್ಯಾಯಾಲಯವು ಸಲಹಾತ್ಮಕ ಅಧಿಕಾರವನ್ನು ಹೇಗೆ ಚಲಾಯಿಸುತ್ತದೆ ?

26. ಸರ್ವೋಚ್ಚ ನ್ಯಾಯಾಲಯದ ನ್ಯಾಯಾಧೀಶರಿಗೆ ಪ್ರಮಾಣ ವಚನವನ್ನು ಬೋಧಿಸುವವರು ಯಾರು ?

**IV. ಈ ಕೆಳಗಿನ ಪ್ರಶ್ನೆಗಳಿಗೆ ಎರಡರಿಂದ ನಾಲ್ಕು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**14 × 2 = 28**

27. ಕೇಂದ್ರ ಲೋಕಸೇವಾ ಆಯೋಗದ ಸದಸ್ಯರನ್ನು ಹೇಗೆ ಪದಚ್ಯುತಿಗೊಳಿಸಬಹುದು ?

28. ಸರ್ವೋಚ್ಚ ನ್ಯಾಯಾಲಯದ ಮೂಲ ಅಧಿಕಾರಗಳು ಯಾವುವು ?

29. ಭಾರತದ ರಾಷ್ಟ್ರಪತಿಗಳು ಹೇಗೆ ಚುನಾಯಿತರಾಗುತ್ತಾರೆ ?

30. ಗಾಂಧಿವಾದಿ ತತ್ವಗಳನ್ನು ಪಟ್ಟಿಮಾಡಿ.

31. ಕಂದಾಯ ನ್ಯಾಯಾಲಯಗಳನ್ನು ಏಕೆ ಸ್ಥಾಪಿಸಲಾಗಿದೆ ?

32. ವಿಧಾನಸಭೆಯ ಸಭಾಧ್ಯಕ್ಷರ ಪಾತ್ರವನ್ನು ವಿವರಿಸಿ.

33. ರಾಜ್ಯಸಭೆಯ ಅಧಿವೇಶನದ ವಿಧಗಳು ಯಾವುವು ?

34. ರಾಜ್ಯನೀತಿ ನಿರ್ದೇಶಕ ತತ್ವಗಳು ಏಕೆ ಅವಶ್ಯಕ ?

35. ಜಿಲ್ಲಾ ಪಂಚಾಯಿತಿಯ ಹಣಕಾಸಿನ ಮೂಲಗಳು ಯಾವುವು ?

36. ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಲು ಇರಬೇಕಾದ ಅರ್ಹತೆಗಳು ಯಾವುವು ?

37. ವಿಧಾನಸಭೆಯ ಚುನಾವಣಾ ಅಧಿಕಾರಗಳು ಯಾವುವು ?

38. ರಾಷ್ಟ್ರಪತಿಗಳ ತುರ್ತು ಪರಿಸ್ಥಿತಿ ಅಧಿಕಾರಗಳು ಯಾವುವು ?

39. ರಾಜ್ಯನೀತಿ ನಿರ್ದೇಶಕ ತತ್ವಗಳ ಉದಾರವಾದಿ ತತ್ವಗಳನ್ನು ತಿಳಿಸಿ.

40. 1919 ರ ಶಾಸನದ ಅಂಶಗಳು ಯಾವುವು ?

**V. ಈ ಕೆಳಗಿನ ಪ್ರಶ್ನೆಗಳಿಗೆ ಮೂರರಿಂದ ಆರು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ :**

**6 × 3 = 18**

41. ಕೇಂದ್ರ ಲೋಕಸೇವಾ ಆಯೋಗದ ಕಾರ್ಯಗಳನ್ನು ವಿವರಿಸಿ.

42. ಮುಖ್ಯಮಂತ್ರಿಗಳ ಕಾರ್ಯಗಳು ಯಾವುವು ?

43. ಸಾರ್ವಜನಿಕ ಹಿತಾಸಕ್ತಿ ಮೊಕದ್ದಮೆಯನ್ನು ವಿವರಿಸಿ.

44. ಲೋಕಸಭೆಯ ಸಭಾಪತಿಯ ಕಾರ್ಯಗಳು ಯಾವುವು ?

45. ಮೂಲಭೂತ ಹಕ್ಕುಗಳಿಗೆ ಧಕ್ಕೆಯುಂಟಾದಾಗ ಸರ್ವೋಚ್ಚ ನ್ಯಾಯಾಲಯವು ಹೊರಡಿಸುವ ರಿಟ್‌ಗಳನ್ನು ಹೆಸರಿಸಿ.

46. ನಮ್ಮ ಸಂವಿಧಾನದ ಪ್ರಸ್ತಾವನೆಯನ್ನು ಬರೆಯಿರಿ.

**VI. ಈ ಪ್ರಶ್ನೆಗೆ ಎಂಟು ವಾಕ್ಯಗಳಲ್ಲಿ ಅಥವಾ ಅಂಶಗಳಲ್ಲಿ ಉತ್ತರಿಸಿ : $1 \times 4 = 4$**

47. ನಗರ ಪಾಲಿಕೆಯ ಕಾರ್ಯಗಳನ್ನು ತಿಳಿಸಿ.